ಶ್ರೀ ಬಸವರಾಜ ಹೆಚ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಪ್ರಕಾರ 7.11.2002ರಂದು ಟರ್ನ್‌ಕಿ ಬೇಸಿಸ್ ಮೇಲೆ ಕಂಟ್ರಾಕ್ಟರ್‌ಗೆ ಕೆಲಸ ವಹಿಸಲಾಗಿದೆ. ನೀವು ಹೇಳಿದ ಪ್ರಕಾರ ಮೆಟೀರಿಯಲ್ ಇನ್‌ಸ್ಪೆಕ್ಷನ್ ಆಗಬೇಕೆಂದು ಕಂಟ್ರಾ ಕ್ಟರ್ ತಮಗೆ ಏನು ಹೇಳಿದ್ದಾರೆ, ಅದು ನಿಜವಾದ ಮಾತು. ಜನವರಿಯಲ್ಲಿ ಆ ಮೆಟೀರಿಲ್ ಇನ್‌ಸ್ಪೆಕ್ಷನ್ ಕೂಡ ಆಗಿದೆ. ಈಗಾಗಲೇ ಅದು ಕೆಲಸ ಪ್ರಾರಂಭ ಮಾಡುವ ಹಂತದಲ್ಲಿ ಇದೆ. ಅದು ಆದಷ್ಟು ಬೇಗ ಕೆಲಸ ಪ್ರಾರಂಭ ಆಗಿ ತಮಗೆ ಆದಷ್ಟು ಬೇಗ ಆ ಕೆಲಸ ಪೂರೈಸಿಕೊಡುತ್ತೇವೆ.

ಶ್ರೀ ಕೆ. ಗೋಪಾಲ ಪೂಜಾರಿ :- ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ 200 ಉಪ ಗ್ರಾಮಗಳ ಪ್ರಸ್ತಾವನೆ ನಿಮ್ಮ ಇಲಾಖೆ ಮುಂದೆ ಇದೆ. ಈ ಟರ್ನ್‌ಕಿ ಬೇಸಿಸ್‌ನಲ್ಲಿ ನಮಗೆ ಅನುಮತಿ ಕೊಡುತ್ತೀರಿ ಅಥವಾ ಬೇರೆ ಯಾವ ಸ್ಕೀಮ್‌ನಲ್ಲಿ ಕೊಡುತ್ತೀರಿ? ನನ್ನ ಕ್ಷೇತ್ರದಿಂದ 200 ಉಪ ಗ್ರಾಮಗಳಿಗೆ ವಿದ್ಯುದ್ದೀಕರಣದ ಪ್ರಸ್ತಾವನೆಯನ್ನು ತಮಗೆ ಕಳುಹಿಸಿದ್ದೇವೆ.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಆ ಯೋಜನೆ ತಮಗೆ ಸ್ಯಾಂಕ್ಷನ್ ಆದ ಮೇಲೆ ಈಗಾಗಲೇ ತಮ್ಮಲ್ಲಿ ಆಗಿರುವ ಕುಂದಾಪುರ 26 ಹ್ಯಾಮೆಲೆಟ್‌ಗಳು ಕಾರ್ಕಳ 50 ಒಟ್ಟು 76 ಮಂಜೂರಾಗಿದೆ. ಅದು ಟರ್ನ್‌ಕಿ ಬೇಸಿಸ್‌ನಲ್ಲಿ ಕೊಡಲಾಗಿದೆ. ಇನ್ನು ಮುಂದೆ ಇರತಕ್ಕಂತಹ ಹ್ಯಾಮಾಲೆಟ್‌ಗಳು ಕೆಪಿಟಿಸಿಎಲ್‌ನಿಂದ ಸರ್ಕಾರದಿಂದ ಮಂಜೂರಾದ ಮೇಲೆ ಟರ್ನ್ ಕಿ ಬೇಸಿಸ್ ಮೇಲೆ ಕೊಡುತ್ತೇವೆ.

ಅಧ್ಯಕ್ಷರು :- ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ: 11.3.03ರ ಲಿಖಿತ ಮೂಲಕ ಉತ್ತರಿಸುವ 176 ಪ್ರಶ್ನೆಗಳ ಪೈಕಿ 136 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಅನುಬಂಧ - 1

ಅಧ್ಯಕ್ಷರು :- ಮಂಡಿಸಲಾಯಿತು.

ಮಾನ್ಯ ಸದಸ್ಯರು :- ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು :- ಈ ಪರಿಪಾಠ ಹೋಗಬೇಕು. 10.30ಕ್ಕೆ ತಾವು ನೋಟಿಸ್ ಕೊಟ್ಟಿದ್ದೀರಿ. ಸರ್ಕಾರಕ್ಕೆ ನಾವು ವಿಷಯ ತಿಳಿಸಬೇಕು. ಬೇಡ? ಹಾಗಿದ್ದರೆ ನೀವು ಉತ್ತರ ಕಂಪೆಲ್ ಮಾಡಬೇಕಾಗಿಲ್ಲ. ಹಾಗಿದ್ದರೆ ಪ್ರಸ್ತಾಪ ಮಾಡಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ಬಿಜಾಪುರ-ಗದಗ್ ರೈಲ್ವೆ ಮಾರ್ಗದಲ್ಲಿ ಬ್ರಾಡ್‌ಗೇಜ್ ಪರಿವರ್ತನೆ

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ (ಬಸವನ ಬಾಗೇವಾಡಿ) :- ಮಾನ್ಯ ಅಧ್ಯಕ್ಷರೆ, ಬಿಜಾಪುರ ಮತ್ತು ಗದಗ್‌ವರೆಗೆ ಇರತಕ್ಕಂತಹ ರೈಲು ಮಾರ್ಗವನ್ನು ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡಬೇಕೆಂಬ ಬೇಡಿಕೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂತಹ ವಿಷಯ. ಇದು ಉತ್ತರ ಭಾರತ ಮತ್ತು ದಕ್ಷಿಣ ಭಾರತಗಳನ್ನು ಜೋಡಣೆ ಮಾಡತಕ್ಕಂತಹ ಒಂದು ಪ್ರಮುಖವಾದ ರೈಲು ಮಾರ್ಗ. ಈ ರೈಲು ಮಾರ್ಗವನ್ನು ಕೇರಾಯ್ಡ್ ಯೋಜನೆಯಲ್ಲಿ ರಾಜ್ಯ ಸರ್ಕಾರದ ಅರ್ಧ ಹಣವನ್ನು ಕೊಡುವುದು ಮತ್ತು ಕೇಂದ್ರ ಸರ್ಕಾರ ಅರ್ಧ ಹಣ ಕೊಡುತ್ತದೆ.